ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 3, Nov-Dec, 2022, Pp. 13-22.
©*IIMRD*, Mysuru.
IIMRD JOURNALS
www.iimrd.com

# ಚದುರಂಗರ – ವೈಶಾಖ ಕಾದಂಬರಿಯ ಜೀವನ ನೋಟ

**ಡಾ ಬಸವರಾಜ ಕುಂಬಾರ***

*ಕನ್ನಡ ಅಧ್ಯಾಪಕರು, ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ.

***ಸಾರಾಂಶ: (Abstract)***

*ಚದುರಂಗರು ಪ್ರಗತಿಶೀಲ ಚಳುವಳಿಯ ಸಂದರ್ಭದಲ್ಲಿ ಕಥೆ, ಕಾದಂಬರಿ, ನಾಟಕಗಳನ್ನು ಬರೆದರಾದರೂ ಕಾದಂಬರಿಕಾರರಾಗಿ ಗುರುತಿಸಿಕೊಂಡವರು. ಶ್ರೀ ಸುಬ್ರಮಣ್ಯರಾಜೇ ಅರಸ್ ಅವರ ನಿಜನಾಮ. ಹುಣಸೂರು ತಾಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ 1916ರ ಜನವರಿ ತಿಂಗಳಲ್ಲಿ ಜನಿಸಿದರು. ಬಿ.ಎ. ಪದವಿ ಪೂರೈಸಿದ ತರವಾಯ ಪುನಾಕ್ಕೆ ಹೋಗಿ ಕೆಲವು ಕಾಲ ಒಕಾಲತ್ತಗಳನ್ನು ನಡೆಸಿದರು. ಚಲನಚಿತ್ರದ ಮೇಲಿನ ಅಭಿಮಾನಕ್ಕಾಗಿ ಅನಂತರ ಮುಂಬೈಗೆ ಹೋಗಿ 'ಮೋಶನ್ ಪಿಚ್ಚರ್ಸ್' ಎಂಬ ಸಂಸ್ಥೆ ಸೇರಿ ಚಿತ್ರ ವಿಮರ್ಶೆ ಬರೆಯ ತೊಡಗಿದರು. ಉಯ್ಯಾಲೆ, ಹೆಜ್ಜಾಲ, ವೈಶಾಖ, ಸರ್ವಮಂಗಳ ಎಂಬ ಪ್ರಸಿದ್ಧ ಕಾದಂಬರಿಗಳನ್ನು ರಚಿಸಿದ್ದಾರೆ. ಸರ್ವಮಂಗಳ, ಉಯ್ಯಾಲೆ ಕಾದಂಬರಿಗಳು ಚಲನಚಿತ್ರಗಳಾಗಿ ಪ್ರಸಿದ್ಧಿ ಪಡೆದಿವೆ. ವೈಶಾಖ ಕೃತಿಗೆ ೧೯೮೩ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ನನ್ನ ರಸಿಕ, ಸ್ವಪ್ನ ಸುಂದರಿ, ಬಂಗಾರದ ಗೆಜ್ಜೆ, ಇಣಕು ನೋಟ, ಶವದಮನೆ, ಮೀನಿನ ಹೆಜ್ಜೆ ಇವರ ಕಥಾ ಸಂಕಲನಗಳು. ಇಷ್ಟೇ ಅಲ್ಲದೆ 'ಕುಮಾರರಾಮ', 'ಇಲಿಬೋನು', 'ಬಿಂಬ' ಎಂಬ ನಾಟಕಗಳನ್ನು ಕೂಡ ರಚಿಸಿದ್ದಾರೆ. ೧೯೭೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ೧೯೯೪ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.*

***ಮುಖ್ಯಪದಗಳು: (Keywords)*** *ಚದುರಂಗರ, ವೈಶಾಖ, ಸ್ನೇಹ, ಸೌಹಾರ್ದ, ಕಾದಂಬರಿ, ಸಾಂಪ್ರದಾಯ.*

**ಪೀಠಿಕೆ**

ಚದುರಂಗರವರ ವೈಶಾಖ ಕನ್ನಡದ ಮಹತ್ವ ಪೂರ್ಣ ಪ್ರಾದೇಶಿಕ ಸಾಮಾಜಿಕ ಕಾದಂಬರಿ. ಕಾವೇರಿ ಲಕ್ಷ್ಮಣ ತೀರ್ಥಗಳ ನಡುವಿನ ಪ್ರದೇಶದ ಗ್ರಾಮ ಜೀವನದ ನುಡಿಗಟ್ಟುಗಳೊಂದಿಗೆ ನಮ್ಮ ಕಣ್ಣಿಗೆ ಕಟ್ಟುವಂತೆ, ಮನಕ್ಕೆ ನಾಟುವಂತೆ ಮೂಡಿ ಬಂದಿದೆ. ಹಳ್ಳಿ ಜೀವನದ ಹತ್ತಾರು ಮುಖಗಳನ್ನು ಚಿತ್ರಿಸುವ ಈ ಕಾದಂಬರಿ, ಶೋಷಿತರ, ದಲಿತರ ದಾರುಣ ಕಥೆ. ಸಾಂಪ್ರದಾಯಿಕ ವ್ಯವಸ್ಥೆಯ ಬರಕ್ಕೆ ಕುಸಿಯುತ್ತಿರುವ ಸ್ತ್ರೀ ಮತ್ತು ಹರಿಜನರು ಪಡುವ ಪಾಡು ಹೃದಯ ಸ್ಪಷ್ಟವಾಗಿ ಇಲ್ಲಿ ಮೂಡಿಬಂದಿದೆ. ನಾಯಕ ನಾಯಕಿಯರು ತುಳಿತಕ್ಕೆ ಒಳಗಾದ ಶೋಷಿತ ಜನಾಂಗದ ತರುಣ ಮತ್ತು ಒಬ್ಬ ತರುಣಿ ಬ್ರಾಹ್ಮಣ ವಿಧವೆ. ಅವನಿಗೆ ಅವಳಲ್ಲಿ ತುಂಬಾ ಗೌರವ, ವಿಶ್ವಾಸ. ಅವಳಿಗೆ ಅವನಲ್ಲಿ ಸ್ನೇಹ, ಆದರೆ ಯಾವುದೋ ಒಂದು ವಿಷಯಗಳಿಗೆ ಇಲ್ಲಿ ಮತ್ತು ಆ ಕ್ಷಣಗಳ ಅವಧಿಗೆ ಮಾತ್ರ ಕಾಮ ಸೌಹಾರ್ದ ಸಂಬಂಧವನ್ನು ಕಲುಷಿತಗೊಳಿಸಿದ ಹಿನ್ನೆಲೆಯ

*Please cite this article as:* ಡಾ ಬಸವರಾಜ ಕುಂಬಾರ. (2022). ಚದುರಂಗರ – ವೈಶಾಖ ಕಾದಂಬರಿಯ ಜೀವನ ನೋಟ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 13–22.*

ವಿಷಯ ವಸ್ತು ಒಳಗೊಂಡಿದೆ. ಕಾಮದ ಬೇಗೆಗೆ ಸುಡುತ್ತಿರುವ ಗ್ರಾಮ ಸಮಾಜವನ್ನು ಚಿತ್ರಿಸುವ ಈ ಕಾದಂಬರಿಯ ಶೀರ್ಷಿಕೆಯನ್ನು ಸೂಚಿಸುವ ಹಾಗೆ ವಾತಾವರಣವನ್ನು ಪ್ರತಿನಿಧಿಸುವಂತೆ ಕಾಣುತ್ತದೆ. ಕಾಮದ ಬರತೆಗೆ ಸಿಕ್ಕು ಸಮಾಜಕ್ಕೆ ಸಮಾಜವೇ ಅಭದ್ರಗೊಂಡ ಚಿತ್ರಣ ಕಣ್ಣಿಗೆ ಕಟ್ಟುವಂತೆ ಮೂಡಿ ಬಂದಿದೆ. ಆರ್ಥಿಕ, ಸಾಮಾಜಿಕ, ಧಾರ್ಮಿಕ ಸಂಸ್ಥೆಗಳು, ಸಂಬಂಧಗಳು ಅದಕ್ಕೆ ಧರಮನಹಳ್ಳಿ ಅಧರ್ಮದ ಪಾಳೆಯವಾಗಿ ನೈತಿಕ ಅಧಪಥನದ ಚಿತ್ರಣವನ್ನು ಕೊಡುವಾಗಲು ಜೀವನದ ದರ್ಶನ ಕಾಣುವುದು. ಇಲ್ಲಿನ ಶೋಷಿತರು ದಲಿತರು ತಾವು ಅನುಭವಿಸುವ ಯಾತನೆಯ ದುಸ್ಥಿತಿಗಳಲ್ಲಿಯೂ ತೋರುವ ಗೌರವ, ಘನತೆ, ಆದರ ಮತ್ತು ಉತ್ತಮರು ಅನ್ನಿಸಿಕೊಳ್ಳುವವರಲ್ಲಿ ನಿಜವಾಗಿಯೂ ಒಳ್ಳೆಯತನವನ್ನು ತಮ್ಮ ಆಚಾರ ವಿಚಾರಗಳಲ್ಲಿ ಪ್ರತಿಬಿಂಬಿಸುವುದು ಸಚ್ಚಾರಿತ್ರ್ಯದ ಆಶಾದಾಯಕ ಸಮಾಜದ ರೂಪವು ಇಲ್ಲಿ ಎದ್ದು ಕಾಣುವುದು.

ಸಂಕೀರ್ಣ ಸಮಾಜದ ಚಿತ್ರಣ ಕಟ್ಟಿ ಕೊಡುವಲ್ಲಿ ವೈಶಾಖ ಕಾದಂಬರಿಯ ತಂತ್ರ ವೈಶಿಷ್ಟ ಪೂರ್ಣವಾಗಿದೆ. ಈ ಕಾದಂಬರಿಯ ಬಹುತೇಕ ಭಾಗ ಹೊಲೆಯರ ಹೈದ ತರುಣ ಲಕ್ಕನ ದೃಷ್ಟಿ ಸೃಷ್ಟಿಯಲ್ಲಿ, ಪ್ರಜ್ಞಾ ಪ್ರವಾಹದಲ್ಲಿ, ಅಲ್ಲಿನ ಸ್ಥಳೀಯ ಭಾಷೆಯೊಂದಿಗೆ ನಿರೂಪಿಸಲ್ಪಟ್ಟಿದೆ. ಮತ್ತೊಂದು ಭಾಗದಲ್ಲಿ ಎಳೆಯ ಹರೆಯದ ತರುಣ ಬ್ರಾಹ್ಮಣ ವಿಧವೆ ರುಕ್ಮಿನಿಯ ಮತ್ತು ಅಲ್ಲಲ್ಲಿ ಯಾವುದೋ ಒಂದೊಂದು ವಿಷಯಗಳಿಗೆ ಆರೋಪಿಸಲ್ಪಟ್ಟಿದೆ. ಆಯಾ ಕ್ಷಣದ ಸಂದರ್ಭದಲ್ಲಿ ಸಂಯಮವನ್ನು ಕಳೆದುಕೊಳ್ಳುವ ಸ್ವಾಭಾವಿಕವಾಗಿ ನಿಷ್ಠಾವಂತನಾದ ಅವರ ಮಾವ ಕೃಷ್ಣಶಾಸ್ತ್ರಿಗಳ ದೃಷ್ಟಿಯಿಂದ ಪ್ರಜ್ಞಾಪ್ರವಾಹವಾಗಿ ಅದರದೆ ಭಾಷೆಯಲ್ಲಿ ನಿರೂಪಿಸಲಾಗಿದೆ. ದಲಿತಪ್ರಜ್ಞೆಗೆ ಈ ಸಮಾಜ ಹೇಗೆ ಪ್ರತಿಕ್ರಿಯಿಸಿದೆ, ಅದನ್ನು ಹೇಗೆ ಕಾಣುತ್ತದೆ, ಆ ವರ್ಗದವರು ನೋವನ್ನು ಹೇಗೆ ಉಣ್ಣುತ್ತಾರೆ ಎಂಬ ಸಂಗತಿಯನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ ಚಿತ್ರಿಸಲ್ಪಟ್ಟಿದೆ.

ಲೇಖಕರು ಅದಕ್ಕೆ ಪೂರಕವಾದ ತಂತ್ರಗಳನ್ನು ಪ್ರದರ್ಶಿಸುತ್ತಾ ಅನುಭವದ ಸಂಪತ್ತಿಗೆ ಹೆಚ್ಚಿನ ಪ್ರಮಾಣದಲ್ಲಿ ಕಾಣುತ್ತದೆ. ಇಂತಹ ತಂತ್ರಗಳೊಂದಿಗೆ ಚದುರಂಗರು ಸಾಮಾನ್ಯವಾಗಿ ಕಾವ್ಯಗಳನ್ನು ಬಳಸುವ ರೀತಿ ವೈಶಿಷ್ಟಪೂರ್ಣವಾಗಿದೆ. ಈ ಕಾದಂಬರಿಯ ಶಿಲ್ಪ ವೈವಿಧ್ಯತೆಯ ಹಲವಾರು ಪ್ರಸಂಗಗಳ ಸಾಂಕೇತಿಕತೆಗೆ, ಬಳಸಲಾದ ಪ್ರತೀಕಗಳು. ಈ ಕಾದಂಬರಿಯ ಮುಖ್ಯ ಉದ್ದೇಶಕ್ಕೆ ಪೂರಕವಾಗಿ, ಪರಿಣಾಮಕಾರಿಯಾಗಿ ಮೂಡುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಇಲ್ಲಿನ ಕೆಲವು ಘಟನೆಗಳು ಸ್ವತಂತ್ರವಾದ ಕಥೆಗಳಲ್ಲಿ ಆಗುವ ಸಾಧ್ಯತೆಗಳಿವೆ. ಕೆಲವು ಕ್ರಿಯೆಗಳ, ಸಂಗತಿಗಳ, ವರ್ಣನೆಗಳ, ಕಥೆ ಕವನಗಳು ಆಗಬಲ್ಲ ಸಾಧ್ಯತೆಗಳು ಉಂಟು. ಆದರೆ ಎಲ್ಲವೂ ಸುಭದ್ರವಾದ ಸಮಗ್ರ ಶಿಲ್ಪದ ಹಿಡಿತಕ್ಕೆ ಸೇರಿದಂತಿವೆ. ಇಲ್ಲಿನ ಕಥನದ ಗತಿಯು ಏರು ಇಳುವಿನಿಂದ ಕೂಡಿದೆ. ಐಕ್ಯತೆಯ ಸಮಗ್ರ ಶಿಲ್ಪದ ದೃಷ್ಟಿಯು ಕಥೆಯ ಒಡನಾಟದಲ್ಲಿ ಅಡಕವಾಗಿದೆ.

ಕಾದಂಬರಿಯನ್ನು ಸಹಜವಾಗಿ ಗಮನಿಸಿದಾಗ ಪೂರ್ವಭಾಗ ಮತ್ತು ಉತ್ತರ ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನಕ್ಕಿಳಿದಾಗ ಮೊದಲ ಭಾಗದಲ್ಲಿ ನಾಟಕೀಯ ಕ್ರೀಯೆಯ ಹಿನ್ನೆಲೆಯನ್ನು ಒದಗಿಸಿದರೆ, ಉತ್ತರಾರ್ಧದಲ್ಲಿ ಅದರ ಪರಿಣಾಮದ ಪರ್ವವಾಗಿ ಚಿತ್ರಿಸುತ್ತಾ ಹೋಗುತ್ತದೆ. ಮೊದಲ ಅಧ್ಯಾಯದಲ್ಲಿ ಕಾದಂಬರಿಯ ಮುಖ್ಯ ಉದ್ದೇಶಗಳನ್ನು ಈ ರೀತಿಯ ಸನ್ನಿವೇಶ ಹುಟ್ಟು ಹಾಕುತ್ತಾರೆ.

"ಓಣೀಲಿ ಸಣ್ಣ ಕಲ್ಲೊಂದ್ನ ವದೀತ ಬತ್ತಾ ಇದ್ದ ಲಕ್ಕನ ತಲೇಲಿ ಎಷ್ಟೋತ್ನಿಂದ ಒಂದೇ ಇಚಾರ ಚಕ್ಕಲುಬಕ್ಕಲು ಅಕಿತ್ತು. ಬೊಡ್ಡಿ ಮಕ್ಕಳು ಉದ್ದಕ್ಕೂ ನಮ್ಮ ಲಗ್ಗೆ ಚಂಡು ಮಾಡ್ಕಂಡುಬುಟ್ರಲ್ಲ ಅಂತ ಕ್ವಾಮಪದಿಂದ ಕ್ಯಾಕರ್ಸಿ ಪಕ್ಕದ ಬೇಲಿಗ ಉಗುಳ್ದ. ಪಂಚಾತಿಯೋರು ಮಾಡೋ ನ್ಯಾಯದ ದಾಳ ಉಳ್ಳೋದು ಕೊನೀಕೆ ಉತ್ತಮರ ಕಡೀಕೇಯ..... ತುಸು ಗಟ್ಯಾಗೆ ಗೊಣಗ್ದ..." (ಪು.ಸಂ.1)

"ಬೆದೆಗೆ ಬಂದಿರೊ ಕಡಸಿಗೆ ಹೋರಿ ಕೊಡಿಸದೆ ಹಾಗೇ ಬಿಟ್ವರೆ, ಅದಿನ್ನೇನು ಮಾಡುತ್ತೆ? ತನ್ನ ತೀಟೆ ತೀರಿಸಿಕೊಳ್ಳಲಿಕ್ಕೆ, ಸಿಕ್ಕುಸಿಕ್ಕಿದ ಹಸುಗಳ ಮೇಲೆ ಹಾರುತ್ತೆ...... ಮುಖ್ಯ, ಆ ಕಡಸನ್ನ ಸಾಕ್ತಿರೊ ಜನಕ್ಕೆ ಗ್ಯಾನ ಇರಬೇಕು....." (ಪು.ಸಂ.3)

ಮೊದಲ ಮಾತು ಕಾದಂಬರಿಯ ತಿರುಳನ್ನು ಚಿತ್ರಿಸುವಂತಿದ್ದರೆ, ಎರಡನೆಯ ಮಾತು ತರುಣ ಯುವಕನ ಜೀವನದಲ್ಲಿ ನಡೆಯಬೇಕಾದ ಪ್ರತಿಯೊಂದು ಘಟನೆಗಳು ನಡೆದು ಹೋಗಬೇಕಾದ ಸಂದರ್ಭ ಚಿತ್ರಿಸಿ, ಒಂದು ವೇಳೆ ನಡೆಯದಿದ್ದರೆ ಯಾವ ರೀತಿ ದುರಂತ ಜರುಗುತ್ತವೆ ಎಂಬುದನ್ನು ಚಿತ್ರಿಸುತ್ತದೆ. ಎರಡನೆಯ ಮಾತನ್ನು ಮಡಿ ಹೆಂಗಸು ಲಕ್ಷ್ಮಮ್ಮ ಆಡಿರುವುದು. ಕಡಸು ತರುಣ ವಿಧವೆಯ ರುಕ್ಮಿಣಿಯ ಮನೆಯದು. ಅದಕ್ಕೆ ಹೋರಿ ಕೂಡಿಸುವ ಸಹಾಯ ಮಾಡುವಂತೆ ರುಕ್ಮಿಣಿ ಕೇಳುವುದು ಲಕ್ಕನನ್ನು. ಲಕ್ಕ ಇದಕ್ಕೆ ಒಪ್ಪುತ್ತಾನೆ. ಇಲ್ಲಿ ಎರಡು ಮನಸ್ಸುಗಳ ಮನೋಭಾವದ ಮನೋ ವ್ಯಾಪಾರದ ಚಿತ್ರಣ ಕಾಣುತ್ತೇವೆ. ಈ ಸಂದರ್ಭದಲ್ಲಿ ರುಕ್ಮಿನಿಯ ಮನಸ್ಸಿಗೆ ನೋವಾಗುವ ಮಾತುಗಳು ಕೇಳಿ ಬರುತ್ತವೆ.

"ಹಾಲು ಕುಡಿಯಬೇಡವೇ ರುಕ್ಕು... ಹಾ.... ಮಾಡುವ ಹಾಗಾಗುತ್ತೋ ಅಂದು ಬಿಡುವುದೇ?" ಎಂದು ಮೊದಲ ಖಂಡದ ಎರಡನೇ ಅಧ್ಯಾಯದಲ್ಲಿ ಬರುವ ಈ ಮಾತು ಅವಳ ಮನಸ್ಸಿಗೆ ನಾಟುತ್ತದೆ. ಈ ಸಮಾಜದ ಕೊಂಕು ನುಡಿಗಳೇ ಈ ಕಾದಂಬರಿಯ ಜೀವದ್ರವ್ಯ. ಗ್ರಾಮ ಸಮಾಜ ವ್ಯವಸ್ಥೆಯ ಏರುಪೇರನ್ನು ಪಂಚಾಯತಿಯ ಕಾರ್ಯ ಚಟುವಟಿಕೆಯ ನ್ಯಾಯಪರತೆ ಕೊರತೆಯ ಅಭಾವನ್ನು ಒತ್ತಿ ಹೇಳಿ, ಹರೆಯದ ಮನಸ್ಸುಗಳ ಲೈಂಗಿಕತೆಯ ಸಹಜ ಕೃಪೆಯನ್ನು ಹತ್ತಿಕ್ಕುವ ಅಪಾಯಗಳನ್ನು ಸೂಚಿಸುತ್ತಾ ಹೋಗುವುದು. ಪ್ರಮುಖ ಪಾತ್ರಧಾರಿಗಳಾಗಿ ಲಕ್ಕ, ರುಕ್ಮಿಣಿ, ಕೃಷ್ಣಶಾಸ್ತ್ರಿ ಹಾಗೂ ಲಕ್ಷಮ್ಮ ಈ ಪಾತ್ರಗಳ ಜೊತೆ ಪಂಚಾಯಿತಿಯಲ್ಲಿ ಅತ್ಯಂತ ಕ್ರಿಯಾಶೀಲ ಸದಸ್ಯನಾದ ನಂಜೇಗೌಡರನ್ನು ವಿವರವಾಗಿ ಚಿತ್ರಿಸುತ್ತ ಸಮಾಜಮುಖಿ ಚಿಂತನೆಯಲ್ಲಿ ತೊಡಗಿಸುತ್ತದೆ.

ಕಾದಂಬರಿಯಲ್ಲಿ ಲಕ್ಷಮ್ಮನ ಮುಸುಕು ಹಾಕಿದ ಚುಚ್ಚು ಮಾತುಗಳಲ್ಲಿ ರುಕ್ಮಿಣಿಯನ್ನು ಛೇಡಿಸುತ್ತಲೇ ಇರುವುದು. ಸಾಕ್ಷಾತ್ ಬ್ರಹ್ಮದೇವ ತಾನೇ ಸೃಷ್ಟಿಸಿದ ಮಗಳು ಶಾರದೆಯಲ್ಲಿ ಮೋಹಹೋಗೊಳ್ಳಲಿಲ್ಲವೇ? ಎಂಬ ತರ್ಕ ಆರಂಭವಾದದ್ದು ಕೃಷ್ಣಶಾಸ್ತ್ರಿಗಳು ಪ್ರಾಯದ ಹೆಣ್ಣು ರುಕ್ಮಿಣಿ ಇಬ್ಬರೇ ಒಟ್ಟಿಗೆ ಇರುವಾಗ ಎಲ್ಲವೂ ಮುಗಿದೇ ಹೋಗಬೇಕು ಎನ್ನುವ ಹಂತವನ್ನು ಮುಟ್ಟಿಬಿಡುತ್ತದೆ.... ಮೊಸರನ್ನು ಕಡಿಯುತ್ತಾ ರುಕ್ಮಿಣಿ "ನನ್ನ ಮಾವಯ್ಯ ದೇವರಂತ ಮನುಷ್ಯ.

ಒಂದೇ ಒಂದು ದಿನವೂ ಸಹ ನನ್ನನ್ನು ಕತ್ತೆತ್ತಿ ನೋಡಿಲ್ಲ. ಇಂತಹ ಪುಣ್ಯಾತ್ಮರ ಚಾರಿತ್ರ್ಯ ವಧೆ ಮಾಡಲಿಕ್ಕೂ ಜನ ಹೇಸಲ್ಲವಲ್ಲ?" ಎಂದು ವ್ಯಥೆ ಪಡುತ್ತಾ.... ನೆಕ್ಕುವ ನಾಯಿಗೆ ಲಿಂಗವೇನು, ಸಾಣಿ ಬಟ್ಟಲೇನು? ಎಂದು ಸಿಡುಕುತನ ತೋರಿ ತನ್ನಲ್ಲಿ ಹೇಳಿಕೊಳ್ಳುವ ಮಾತುಗಳು ಎದೆಗೆ ನಾಟುವಂತಿವೆ. ಮುಂದುವರೆದು ರುಕ್ಮಿಣಿ ನಂಬಲಾರದಂತಹ ಅವಳ ಮೇಲಿನ ಕೃಷ್ಣಶಾಸ್ತ್ರೀಯ ಅತ್ಯಾಚಾರವನ್ನು ಗಾಡಿಯ

ಪ್ರಯಾಣದ ಸಂದರ್ಭದಲ್ಲಿ ನಡೆದು ಹೋದ ರುಕ್ಮಿಣಿಯ ಲೈಂಗಿಕತೆಯ ಉಲ್ಬಣ್ಣ ಮತ್ತು ಉಪಶಮನ ಮತ್ತು ಸ್ನಾನದ ಪ್ರತ್ಯಾಶೆಯವನ್ನು ನೆಟ್ಟ ನೋಟದಲ್ಲಿ ನಿರೂಪಿಸುತ್ತದೆ. ಕಣ್ಣಿಗೆ ಕಟ್ಟುವಂತೆ ಚಿತ್ರಣ ಮೂಡಿ ಬರುತ್ತದೆ. "ಹಿಂದಿನ ದಿನ ಮಳೆ ಬಿದ್ರೆ ಮಾರನೇ ದಿನ ಕಾಡಿನಲ್ಲಿ ನಡೆಯೋಕೆ ಯಾವತ್ತೂ ಉಮೇದು" ಆದರೆ ಆವತ್ತು ಲಕ್ಕಂಗೆ ಯಾಕೋ ಬಿಡಾ ಬ್ಯಾಸರ. ಆ ಸಮಯಕ್ಕೆ ಸರಿಯಾಗಿ ಯಾವುದು ಮರದ ಮ್ಯಾಗಿಂದ ಒಂದು ಹಕ್ಕಿ ಕೂಗಿದಂತಾಗಿತ್ತು....

"ಉಪ್ಪಲ ಸೆಟ್ಟಿ<br>
ಉಪ್ಪಲ ಸೆಟ್ಟಿ<br>
ನೀ ತರ್ರ್ರೆ<br>
ನಾ ಪುರ್ರ್ರೆ"

ಈ ಹಾಡಿನ ಹಿಂದಿನ ಕಥೆಯ ಹಕಿಕತ್ತು ಸರಿ ಹಾಕಿಕೊಂಡಿದ್ದ ಹಕ್ಕಿ ಸೆಟ್ಟಿಗೆ ಊಹಿಸಲು ಅಸಾಧ್ಯವಾಗುವಂತೆ ಕರಿ ಬೆಳೆಸಿಕೊಂಡು ತಪ್ಪಿಸಿಕೊಂಡು ಹಾರಿಹೋಯಿತು ಎಂಬುದು ಒಂದೆಡೆಯಾದರೆ, ಮುಂದೆ ಬರುವ ಲಕ್ಕನ ಇನ್ನೊಂದು ನೆನಪು ಈ ರೀತಿ ಆಗಿದೆ. "ಬಿಮ್ಮನಸೆಯಾದ ಹೆಂಗಸು ಸತ್ತರೆ ಹೊಟ್ಟೆ ಒಳಗಡೆ ಇರುವ ಇನ್ನೊಂದು ಜೀವವು ಸತ್ತಂತೆ ಅಲ್ವಾ? ಅದಕ್ಕೆ ಸುಮಾರು ಜಾತಿಯ ಜನ ಮಣ್ಣು ಬಗೆದು ಅಂತಹ ಹೆಣ ಹೂಳಕ್ಕಿಲ್ಲ ಕಣಪ್ಪ.... ಒಂದು ಪಕ್ಕಸಾ ಹೂತರೆ ಆ ಹೆಣ ಹೂತ ಆಸುಪಾಸಲ್ಲಿ ಮಳೆಬೆಳೆ ಆಗಕ್ಕಿಲ್ಲಂತೆ ಎಂದು ವಿವರಿಸಿದ್ಲು ಅವ್ವ.." ಲಕ್ಕನಿಗೆ ಅವನ ತಾಯಿಯ ವಿವರಣೆಯ ಕೊಡುವುದು ಅಂತಹ ಭೀಮ್ಮನಸೆಯ ಹಣವನ್ನು ರಣಹದ್ದುಗಳು ಕಿತ್ತು ತಿನ್ನುವ ಘೋರ ದೃಶ್ಯವನ್ನು ಲಕ್ಕ ಕಂಡು ತಾಯಿಗೆ ತಿಳಿಸುತ್ತಾನೆ. ಆಗ ತಾಯಿ ತಾವು ತಪ್ಪಿಸ್ಥನಕ್ಕೆ ಈ ಪಟಂಗರು ಊರಿನಲ್ಲಿ ನನ್ನ ಮೇಲೆ ತಪ್ಪು ಹೊರಿಸಿ ತಮಾಷೆ ಮಾಡೋದಕ್ಕೂ ಹೆಸುವರಲ್ಲ.. ಆಗ ಊರಿನಲ್ಲಿ ನನ್ನ ಮೇಲೆ ಮತ್ತೊಂದು ನ್ಯಾಯ ತೂ.. ಈ ಹಾಳು ಜನರ ಸಹವಾಸವೇ ಬೇಡ..." ಎಂಬ ನುಡಿ ಮನುಷ್ಯ ಮನುಷ್ಯನನ್ನು ಕಾಣುವ ರೀತಿಯ ಚಿತ್ರಣವಿದೆ.

ಕಾದಂಬರಿಯ ಕೊನೆಯಲ್ಲಿ ಈಗಾಗಲೇ ಸೂಚಿತವಾಗಿರುವ ರುಕ್ಮಿಣಿಗೆ ತಾನು ಕಂಡಿದ್ದ ಬಿಮ್ಮನಸೆಯ ಗತಿ ಬರಬಾರದೆಂದು ಲಕ್ಕ ಗ್ರಾಮ ಪಂಚಾಯಿತಿಯ ಮುಂದೆ ನಡೆದು ಬಂದು ಅತ್ಯಾಚಾರಕ್ಕೆ ತನ್ನದೇ ಹೊಣೆ ಎಂದು ಒಪ್ಪಿಕೊಂಡು ಶಿಕ್ಷೆ ಅನುಭವಿಸುವುದು ಮತ್ತು ಊರಿನಿಂದ ತೆರಳುವುದಕ್ಕೆ ತೀರ್ಮಾನಕ್ಕೆ ಬಂದಾಗ ರುಕ್ಮಿಣಿಗೆ ಅವನ ತ್ಯಾಗದಿಂದಲೂ ಯಾವ ಸಹಾಯವು ಆಗದೆ, ರುಕ್ಮಿಣಿಗೆ ಅನಿವಾರ್ಯವಾಗಿ ಬಂದು ಒದಗುವ ಅನಾಥ ಸಾವಿನ ಚಿತ್ರಣ ಅಡಕವಾಗಿದೆ. ಈ ಸಂದರ್ಭದಲ್ಲಿ ಲಕ್ಕನ ಮನಸ್ಸಿನಲ್ಲಿ ಸಮಾಧಾನ ಉಂಟಾಗಲು ಒಂದು ಆನೆ ಮರೆಯು ಹುಟ್ಟಿ ನಿಧಾನವಾಗಿ ನಿಲ್ಲುವುದನ್ನು ಕಲಿಯುವುದರ ಸಂಕೇತದಲ್ಲಿ ಸೂಚಿಸುತ್ತಾ ಅವನ ಅರಳಿದ ಆಶಾಭಾವದಲ್ಲಿ ಈ ರೀತಿ ಮುಕ್ತಾಯಗೊಳ್ಳುತ್ತದೆ.

"ಅವನು ಅವಳಿಗೆ ಈಗ ಚಿಕ್ಕವನಾಗಿದ್ದಾಗ ಊರ ಓಕಳಿ ಹಬ್ಬದಲ್ಲಿ ತಮಟೆ ಬಾರಿಸುತ್ತಾ ಮೇಲೆ ಯಾವುದೋ ದೇವತೆ ನಂಗೆ ಜಗ್ಗನಕ ಜಗ್ಗನಕ ಕುಣಿತ ಊರ್ನೋರನ್ನೆಲ್ಲ ದಂಗು ಮಾಡಿದ್ದ ಹೈದ ಲಕ್ಕ ಮೂಡಿದ್ದ!...." ಈ ಕುಸುಮತನಲ್ಲೇ ಲಕ್ಕ ನಡಿತಾ ಇದ್ದ. ಅವನು ನಡೆತಿದ್ದಂಗೆ ಒಂದು ಸೂರ್ಯಕಟ್ಟಿ

ದೂಪದ ಮರದ ಮೇಲೆ ಕುಂತು ಹಾಡುವುದು. ಆಗ ಲಕ್ಕನ ಮನ ನೊಂದು ಕಟ್ಟಿದ ಮೀನಿನಂತಾಗಿತ್ತು. ಈ ಸಂದರ್ಭದಲ್ಲಿ ಉದಾತವಾದ, ಉಚಿತವಾದ ದಲಿತ ಮನೋಸ್ಥಿತಿಯವರನ್ನು ಗೆರೆ ಕೊರೆದು ದುಡಿಸಿಕೊಳ್ಳುವ, ಅದರಿಂದ ಬಿಡುಗಡೆಯಾಗಲು ಹವನಿಸುವ ಮನೋಸ್ಥಿತಿಯೊಂದಿಗೆ ಉನ್ನತಿಯನ್ನು ಉದ್ಧಾರವನ್ನು ಕಂಡು ಕೊಳ್ಳುವುದೆಂಬ ಆಶಯವಿಲ್ಲಿ ಅಭಿವ್ಯಕ್ತವಾಗಿದೆ.

ಕಾದಂಬರಿಯ ಆರಂಭ ಮುಕ್ತಾಯ ಮೊದಲ ಕೊನೆಯು ಕಾವ್ಯಮಯವಾಗಿ, ನಾಟಕೀಯವಾಗಿ, ಸಾಂಕೇತಿಕವಾಗಿ ಹಾಗೂ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಇದರಲ್ಲಿ ಶೈಲಿಯ ಗ್ರಾಮ್ಯ ಕಸುವನ್ನು ಕಾವ್ಯ ಗುಣವನ್ನು ಒಟ್ಟಿಗೆ ಪ್ರದರ್ಶಿಸುವುದು. ಇದರಲ್ಲಿ ಮೊದಲ ಭಾಗ ಯಶಸ್ವಿ ಆದಷ್ಟು ಎರಡನೇ ಭಾಗ ಯಶಸ್ವಿ ಅನ್ನಿಸುವುದಿಲ್ಲ. ನಿದ್ರಿಗೆ ಜಾರಿದ ರುಕ್ಮಿಣಿಯ ಮೇಲೆ ನಿಷ್ಠಾವಂತನಾದ ಮಾವಂದಿರು ಎದುರಿಗೆ ಅವಳು ಕಣ್ಣು ತೆರೆದು ಕಿರುಚಲು ಪ್ರಯತ್ನಿಸಿದರು ಬಿಡದೆ ತಮ್ಮ ಲೈಂಗಿಕ ತೃಸೆಯನ್ನು ಹಿಂಗಿಸಿಕೊಳ್ಳುವುದು ಅಷ್ಟು ಸಂಭವನೀಯ ಎನಿಸುವುದಿಲ್ಲ. ಅವರ ಪಾತ್ರ ಚಿತ್ರಣದಲ್ಲಿ ಈ ಕ್ಷಣದ ಸೋಲಿಗೆ ಸಾಕಷ್ಟು ಪೂರ್ವ ಸಾಧ್ಯತೆ ಇರುವಂತೆ ಕಾಣುವುದಿಲ್ಲ.

ಆದರೂ ಜಾನಕಿಯ ಮೇಲೆ ಅತ್ಯಾಚಾರ ನಡೆದಾಗ ಅವರು ಗರ್ಭವತಿಯಾದರೆ ಗತಿ ಏನೆಂದು ಆತಂಕ ಪಡುತ್ತಿದ್ದ ರುಕ್ಮಿಣಿ ತನ್ನ ವಿಷಯದಲ್ಲಿ ಈ ಸಾಧ್ಯತೆಯನ್ನು ಚಿಂತಿಸದೇ ಇರುವುದು ಆಶ್ಚರ್ಯಕರವಾಗಿ ಮೂಡಿಬಂದಿದೆ. ಆ ಘಟನೆಯಿಂದ ಉದ್ರಿಕ್ತಳಾದರೂ, ಒಪ್ಪಿದರು ರುಕ್ಮಿಣಿ ಬೆಳಗಿನ ಜಾವದಲ್ಲಿ ಗಾಡಿಯಲ್ಲಿ ಮಳೆಯಲ್ಲಿ ತನ್ನ ತಾಯಿಯಂತೆ ಕಾಣುತ್ತಿದ್ದ ತಾನು ನಿರ್ವಾಜ್ಯ ವಾತ್ಸಲ್ಯ ಆಧಾರಗಳಿಂದ ಕಾಣುತ್ತಿದ್ದ ಲಕ್ಕನನ್ನು ಸೆಳೆದುಕೊಂಡು ಅವನ ಮೇಲೆ ಆಕ್ರಮಣ ಮಾಡಿ ತನ್ನ ಉದ್ರೇಕಕ್ಕೆ ಉಪಶಮನ ಪಡೆದುಕೊಳ್ಳುವುದು. ಅವಳು ಹೀಗೆ ತನ್ನ ಮೇಲೆ ಅತ್ಯಾಚಾರ ನಡೆಸುವಾಗಲು 'ಅವಳ ಕೋಮಲ ಬಾಹುಗಳಿಗೆ ಎಲ್ಲಿ ನೋವಾದಿತೋ' ಎಂದು ಲಕ್ಕ ತನ್ನನ್ನು ಅವಳಿಗೆ ಒಪ್ಪಿಸಿಕೊಳ್ಳುವುದು ಅಷ್ಟು ಸಹಜ ಸಮಂಜಸ ಎನಿಸುವುದಿಲ್ಲ. ಇಂತಹ ಅಪರೂಪದ ಕೃತ್ಯಕ್ಕೆ ಅಪರೂಪದ ಸನ್ನಿವೇಶದಲ್ಲಿಯೂ ಕ್ಷಣಿಕವಾಗಿಯೂ ಅವಳು ತೊಡಗುವುದಕ್ಕೆ ಅವರ ಪಾತ್ರದ ಬೆಳವಣಿಗೆಯಲ್ಲಿಯೂ ಸಾಕಷ್ಟು ಪೂರ್ವಸಿದ್ಧತೆ ಕಾಣ ಸಿಗುವುದಿಲ್ಲ.

ಸೂಪ್ತ ಭಾವನೆಗಳನ್ನು ವಿಸ್ಮಯಕಾರಿಯಾಗಿ ಕರೆಯಬಹುದಾದರೂ ಕೃಷ್ಣಶಾಸ್ತ್ರ ಮತ್ತು ರುಕ್ಮಿಣಿಗೆ ಎಸಗುವ ಅತ್ಯಾಚಾರಗಳು ಪಾತ್ರ ರಚನೆಗೆ ವಸ್ತುವಿನ್ಯಾಸಕ್ಕೂ ಬಿಟ್ಟಿರುವ ಎಡರು ತೊಡರುಗಳ ಅವಿಸ್ಕಾರಗಳಂತೆ ಸೂಕ್ಷ್ಮವಾಗಿ ಮೂಡಿ ಬಂದಿರಿವಂತೆ ಕಾಣುತ್ತದೆ. ಇಷ್ಟೆಲ್ಲಾ ರದ್ಧಾಂತದ ನಡುವೆ ರುಕ್ಮಿಣಿಯ ವಿಷಯದ ಅತ್ಯಾಚಾರದಲ್ಲಿ ತನ್ನದೇ ಹೊಣೆ ಎಂದು ಲಕ್ಕ ಒಪ್ಪಿಕೊಂಡು ಶಿಕ್ಷೆ ಅನುಭವಿಸುವ ತ್ಯಾಗ ನಿಷ್ಫಲವಾಗಿ ಬ್ರಾಹ್ಮಣ ವರ್ಗ ರುಕ್ಮಿಣಿ ದಲಿತ ವರ್ಗದವನ ಸಂಪರ್ಕ ಮಾಡಿ ಮಹಾಕಡು ಪಾತಕ ಎಸಗಿದಳೆಂದು, ಪಾಪಿಯೆಂದು ಪರಿಗಣಿಸಿ ಅವಳ ಮೇಲೆ ಹಾಕುವ ಶಿಕ್ಷೆಯು ಸುಸಂಗತವೋ ಎಂದು ತರ್ಕ ಹಾಕಬೇಕಾಗುತ್ತದೆ. ಕಾದಂಬರಿಯ ಪ್ರಾರಂಭದಲ್ಲಿ ಲಕ್ಕ ಹೇಳುವ "ಪಂಚಾಯತಿಯವರು ಮಾಡು ನ್ಯಾಯದ ದಾಳ ಉಳ್ಳೋದು ಕೊನೆಗೆ ಉತ್ತಮರ ಕಡೆಯೇ.." ಎಂಬ ನುಡಿ ಸಮಾಜದ ಸ್ಥಿರ ವಿನ್ಯಾಸದಲ್ಲಿ ಇನ್ನೂ ಹೆಚ್ಚು ರುಜುವಾತ ಆಗುವಂತೆ ಮಾಡಿದೆ.

ಲಕ್ಕ ರುಕ್ಮಿಣಿಯ ಅಕ್ರಮಣ ಅಸಹಾಯಕ ಬಲಿಯಂದು ನಿರ್ಣಯಿಸಿ ಮುಂದೆ ಅವಳು ಹೀಗೆ ಮೇಲಿಂದ ಮೇಲೆ ಅತ್ಯಾಚಾರಕ್ಕೆ ಗುರಿಯಾಗುವಂತೆ ಕ್ರಮಗಳನ್ನು ತೆಗೆದುಕೊಂಡಿದ್ದರೆ ಒಬ್ಬ ಬ್ರಾಹ್ಮಣತಿ ಒಬ್ಬ ಹರಿಜನ ಪುರುಷನ ಮೇಲೆ ಅತ್ಯಾಚಾರ ಮಾಡಿ ಕಡೆಗೆ ಅವನೇ ಅವಳ ಮೇಲೆ ಅತ್ಯಾಚಾರ ಮಾಡಿದನೆಂದು ಸಮಾಜ ನಿರ್ಧಾರ ಕೈಗೊಳ್ಳುವುದರಿಂದ ಅದರ ನ್ಯಾಯ ವಿಪರ್ಯಾಸಕ್ಕೆ ಬರುತ್ತಿದ್ದಷ್ಟು ಹೆಚ್ಚು ಹೆಚ್ಚು ಮಹತ್ವ ಬರುತ್ತಿರಲಿಲ್ಲವೆನಿಸುತ್ತದೆ.

ಕಾದಂಬರಿಯ ಕೇಂದ್ರ ಕ್ರಿಯಾ ಯೋಜನೆಯೆಲ್ಲಿ ಅಪಸ್ವರ ಎತ್ತಿದಂತೆ ಆದರೂ, ಅದನ್ನು ಸಮಗ್ರವಾಗಿ, ಪರಿಣಾಮಕಾರಿಯಾಗಿ, ಅಪೂರ್ವವಾಗಿ, ಪ್ರಾತಿನಿಧಿಕವಾಗಿ ಮೂಡಿಬಂದಿದೆ. ಕಾಮ ಸಾಹಿತ್ಯದಲ್ಲಿ ಸದೃಶಗೊಂಡಿರುವುದು ಇದೇ ಮೊದಲೆನಲ್ಲ. ಆದರೆ ಧರ್ಮಕ್ಕೆ ವಿರುದ್ಧವಾದ ಕಾಮ ಈ ಕಾದಂಬರಿಯಲ್ಲಿ ಸೃಷ್ಟಿಸುವ ಗ್ರಾಮದೊಳಗಿನ ಎಲ್ಲ ವರ್ಗಗಳ, ಎಲ್ಲಾ ಮತಗಳ ಸ್ತರಗಳ ಜೀವನ ಶೈಲಿಯನ್ನು ಆಕ್ರಮಿಸಿ, ಸಂಬಂಧಗಳನ್ನು ಕಲುಷಿತಗೊಳಿಸುತ್ತದೆ. ಸ್ತ್ರೀಯರು ಪತಿಯನ್ನು ಕಳೆದುಕೊಂಡ ಅಥವಾ ತೊರೆದ ಮಹಿಳೆಯರ ಅನ್ಯೆತಿಕ ಸಂಬಂಧಗಳು ಮತ್ತು ಕೆಲವು ಅವರ ಮೇಲೆ ಒತ್ತಾಯಪೂರ್ವಕವಾಗಿ ಹೊರಿಸಿದ್ದವು, ಹೇರಿದ್ದವು.

ಕೆಲವು ಅವರ ಒಪ್ಪಿಗೆಯಿಂದ ಜರುಗಿದವು. ಇಲ್ಲಿ ಬರುವ ರುಕ್ಮಿನಿಯ ಎರಡು ಅತ್ಯಾಚಾರ ಸಂದರ್ಭಗಳ ಸುತ್ತ ಒಂದು ಪರಿವೇಶವನ್ನು ಕಟ್ಟಿ, ಅವುಗಳಿಗೂ ರುಕ್ಮಿನಿಯ ಸಂಬಂಧಗಳಿಗಿರುವ ಸಾಧಕ ಬಾದಕಗಳ ಸಾದೃಶ ವೈದೃಶಗಳಿಂದ ಘಟನೆ ಸಹಜವಾದದ್ದು ಎಂಬಂತೆ ಚಿತ್ರಿತವಾಗಿದ್ದು ಓದುಗರಿಗೆ ಕುತೂಹಲವನ್ನು ಹುಟ್ಟಿಸುತ್ತದೆ. ಇದಕ್ಕೆ ಪ್ರತಿಯಾಗಿ ಬಿಳುವ ಶಿಕ್ಷೆಯ ಆಘಾತ ಎಷ್ಟು ನ್ಯಾಯಯುತವೊ ಅಥವಾ ಅನ್ಯಾಯಯುತವೊ ಎಂಬುದನ್ನು ವಿಶ್ಲೇಷಿಸುತ್ತ ಕ್ರೂರತೆಯ ಮುಖವಾಡಗಳನ್ನು ವೈಶಾಖ ಕಾದಂಬರಿ ಚಿತ್ರಿಸಿದೆ.

ಲಕ್ಕನ ನ್ಯಾಯ ಪಂಚಾಯಿತಿಯ ನ್ಯಾಯಾಧೀಶರಂತೆ ವರ್ತಿಸುವ ಪಂಚಾಯಿತಿಯವರು ಮತ್ತು ಅವರ ಮುತುವರ್ಜಿ ವಹಿಸಿದವರೂ ಎಷ್ಟು ಅನರ್ಹರು ಎಂಬುವುದನ್ನು ವಿಷಾದಪಡಿಸುವುದು. ಇದು ರುಕ್ಮಿನಿಗೆ ಪ್ಲೇಗ ಆವರಿಸಿದಾಗಲೂ ನಡೆದುಕೊಂಡ ರೀತಿಗೂ ಕಾದಂಬರಿಯು ಸ್ಪಷ್ಟವಾದ ಸಂಬಂಧವನ್ನು ಅಂತರ್ಗತಗೊಳಿಸುತ್ತದೆ.

ವೈಶಾಖ ಕಾದಂಬರಿ ಗದ್ಯದ ವೈಭವ. ಇದಕ್ಕೆ ಪೂರಕವೆಂಬಂತೆ ಹಲವಾರು ರಸವತ್ತಾದ ಪ್ರಸಂಗಗಳ ಕಥೆಗಳು ಮೂಡಿ ಬಂದಿವೆ. ಪೂರ್ವ ಭಾಗದಲ್ಲಿ ಬರುವ ಮಾರಮ್ಮನ ಗುಡಿಯ ಇಸ್ಪೀಟ್ ಆಟದ ಪ್ರಸಂಗ, ಗ್ರಾಮಕ್ಕೆ ಪ್ಲೇಗ ರೋಗ ಬಂದಾಗ ಜನರ ವರ್ತನೆಯ ಪ್ರಸಂಗ, ವಿಧವೆ ಗಂಗವ್ವನನ್ನು ಅವಳ ದಾಯಾದಿ ಅಡುವ್ವಪ್ಪ ಪಂಚಾಯಿತಿಗೆ ಎಳೆದ ಪ್ರಸಂಗ, ಬೆಟ್ಟಯ್ಯ ಚಿಕ್ಕೇರಿಯ ಆಸ್ತಿಯನ್ನು ನುಂಗಿ ಹಾಕಿದ ಪ್ರಸಂಗ, ತಾಯಿ ವಿಧವೆ ವೆಂಕಟಿ ಪುರುಷನೊಡನೆ ಕೂಡಿಕೊಂಡಿರುವುದನ್ನು ನೋಡಿ ಮಗ ಆತ್ಮಹತ್ಯೆ ಮಾಡಿಕೊಂಡ ಪ್ರಸಂಗ, ಹೈದನ ಟಿಫಿನ್ ಕ್ಯಾರಿಯರ್ ಕದ್ದ ಟಗರುರಿನ ಪ್ರಸಂಗ, ಲಕ್ಕನು ಮದುವೆಯಾಗಬೇಕಾಗಿದ್ದ ಚೆಲುವಿ ಉದ್ದುರಯ್ಯನ ಜೀತದಾಳಾದ ಪ್ರಸಂಗ ಇಂತಹ ಕಥೆಗಳು ಉಪಕಥೆಗಳ ಮೂಲಕ ಸ್ವಾರಸ್ಯಕರವಾಗಿ ಒಂದೊಂದನ್ನೇ ಒಂದೊಂದನ್ನೇ ಚಿತ್ರಿಸುತ್ತಾ ಬಂದಿದ್ದಾರೆ.

ಕಾದಂಬರಿಯ ಕೇಂದ್ರ ಪಾತ್ರಗಳಾದ ರುಕ್ಮಿಣಿ, ಲಕ್ಕನ ಸುತ್ತವೆ ಸುತ್ತುವುದು. ಅದರಲ್ಲೂ ರುಕ್ಮಿನಿಯ ಮೇಲಿನ ಅತ್ಯಾಚಾರದ ಸುತ್ತ ಕಾದಂಬರಿ ಸ್ತ್ರೀಶೋಷಣೆಯ ಚಿತ್ರಮಾಲೆಯನ್ನು ಚಿತ್ರಹಿಸುತ್ತಲೇ ಹೋಗುವುದು. ಗಂಡ ಸತ್ತ ಸ್ತ್ರೀಯರಿಗೆ ಗಂಡುಗಳು ಬೀಸುವ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡ ಹಕ್ಕಿಯ ಹಾಗೆ ವಿಲವಿಲ ಒದ್ದಾಡುವ ರೀತಿ ಸ್ತ್ರೀ ಶೋಷಣೆಯ ಎಳೆಗಳನ್ನು ಬಿಚ್ಚಿಡುತ್ತಾ ಸ್ತ್ರೀ ಸುರಕ್ಷಿತ ಅಲ್ಲ ಎಂಬಂತಿದೆ. ದಲಿತರ ಸ್ಥಿತಿ ಈ ಸಮಾಜದಲ್ಲಿ ಶೋಚನೀಯ. ಇದ್ದ ತುಂಡು ಭೂಮಿಯನ್ನು ಕಳೆದುಕೊಂಡು ಜೀತಕ್ಕೆ ಜೋತು ಬೀಳುವ ಸ್ಥಿತಿ ಚಿತ್ರಣವಿದೆ.

ಮಕ್ಕಳು ಮರಿಗೆ ವಿದ್ಯೆ ಕಲಿಸುವ ಬಯಕೆಯನ್ನು ಬತ್ತಿಸಿಕೊಂಡ ಬಡಪಾಯಿ ಜೀವಗಳು. ಮತಾಂತರದ ಆವಾಂತರವು ದಲಿತರನ್ನು ಬಿಟ್ಟಿರದ ಸನ್ನಿವೇಶಗಳಿವೆ. ಲಕ್ಕನ ತಂಗಿ ಗಂಡನಡತೆಗೆ ಹೇಸಿಕೊಂಡು ತವರಿಗೆ ಬಂದಳು. ಕೇಶವಯ್ಯನ ಕಾಮ ಕಥೆಯನ್ನು ದಿಟ್ಟತನದಿಂದ ತಿರಸ್ಕರಿಸಿದ ಧೀರತನವಿಲ್ಲಿದೆ. ಕೊನೆಗೆ ಸೋಲುವ, ಸೋತು ಅವನ ವಶವಾಗುವ ರೀತಿ ವಿಭಿನ್ನ. ಅಲ್ಲಿ ಲಕ್ಕನ ತಂಗಿ, ಬ್ರಾಹ್ಮಣ ರುಕ್ಮಿಣಿ ಒಟ್ಟಾರೆ ಹೆಣ್ಣಿನ ಶೋಷಣೆ. ಕೊನೆಗೆ ಸ್ತ್ರೀಶೋಷಣೆಯ ಆವಾಂತರವೇ ಮೂಡಿಬಂದಿದೆ.

ಹರಿಜನ ಕೇರಿಯ ಅನ್ಯಾಯಗಳಿಗೆ ಸಾಕ್ಷಿ ವೈಶಾಖ ಕಾದಂಬರಿ. ಲಕ್ಕ ಅನುಭವಿಸಿದ ಅನ್ಯಾಯಗಳೇ ಅದಕ್ಕೆ ಪೂರಕ ಸಾಕ್ಷಿ. ಅನ್ಯಾಯಗಳಿಗೆ ಅವನು ಪ್ರತಿಭಟಿಸದಿರುವುದೇ ಕುತೂಹಲ. ಅವುಗಳನ್ನು ನಿವಾರಿಸಲು ಕ್ರಿಯಾಶೀಲನಾಗದಿರುವುದೇ ಕಾದಂಬರಿಯ ಜೀವಂತಿಕೆ. ಹಿರಿಯರು ಹೇಳಿದಂತೆ ಅಸಹಾಯಕತೆಯನ್ನು ಅವನು ಒಪ್ಪಿ ಸಾಧು ಪ್ರಾಣಿಯಂತೆ ನಡೆದುಕೊಳ್ಳುತ್ತಾನೆ. ಅಸಹಾಯಕತೆಯನ್ನು ಬಿಟ್ಟರೆ ಇನ್ನೆಲ್ಲಾ ವಿಷಯಗಳಲ್ಲಿಯೂ ಲಕ್ಕನ ಪಾತ್ರ ಮಾರ್ಗದರ್ಶಿ ಆದರ್ಶ ಪಾತ್ರ. ಕುಲಂಕುಶವಾಗಿ ಇದನ್ನು ಗಮನಿಸಿದಾಗ ಅತಿ ಆದರ್ಶ ಆತಂಕಕ್ಕೆ ಮೂಲ ಎಂದು ತೋರಿದಂತೆ ಕಾಣುತ್ತದೆ.

ಕಾದಂಬರಿಯಲ್ಲಿ ಹರಿಜನರ ಶೋಷಣೆಯೊಂದಿಗೆ ಅವರ ಪರಸ್ಪರ ವಾತ್ಸಲ್ಯಗಳ ಹೃದಯಸ್ಪರ್ಶಿ ಚಿತ್ರಣವನ್ನು ಕೊಡುವುದು. ಲಕ್ಕನ ವಿಷಯದಲ್ಲಿ ಅವನ ತಾಯಿ ತೋರುವ ವಾತ್ಸಲ್ಯ ಕಾದಂಬರಿಯ ಕೊನೆಯ ಭಾಗದಲ್ಲಿ ಮನಮುಟ್ಟುವಂತೆ ಮೂಡಿಬಂದಿದೆ. ಜೀವಕ್ಕಿಂತ ಹೆಚ್ಚು ಪ್ರೀತಿಸುವ ತಂಗಿ ಕೇಶವಯ್ಯನೊಂದಿಗೆ ಅನೈತಿಕ ಸಂಬಂಧ ಬೆಳೆಸಿದ್ದು ಕಂಡು ಲಕ್ಕನ ತಂದೆ ಮತ್ತು ಲಕ್ಕನ ದೊಡ್ಡಪ್ಪ ಸಂಸಾರ ಚಿತ್ರಣ ವಾಸ್ತವಿಕ ಹಾಗೂ ವೇದ್ಯವಾಗಿ ಕಾಣುತ್ತದೆ.

ಕಾದಂಬರಿಯ ಯಶಸ್ಸಿನ ಸೂತ್ರಗಳಲ್ಲಿ ಸಾಮಾಜಿಕ ಸ್ಥಿತಿಗತಿಗಳ ಚಿತ್ರಣದೊಂದಿಗೆ ಭಾಷಾ ಬಳಕೆಯು ಮಹತ್ವದ ಸ್ಥಾನವನ್ನು ಪಡೆದುಕೊಳ್ಳುವುದು. ಬಳಕೆಯಾಗುವ ಭಾಷೆಯ ಪ್ರಾದೇಶಿಕ ಚೌಕಟ್ಟು, ಜನಪದಯ ಅಂಶಗಳು, ನುಡಿಗಟ್ಟುಗಳು, ಗಾದೆ ಮಾತುಗಳು, ಪಡೆನುಡಿಗಳು ಸಂವೇದನಾಶೀಲ ಗುಣಗಳೊಂದಿಗೆ ಪ್ರಾದೇಶಿಕತೆಯ ಮೆರೆಗು ಕೃತಿಗೆ ಮನ್ನಣೆ ದೊರೆಯುವಂತೆ ಗೊತ್ತಿಲ್ಲದೆ ದುಡಿಯುತ್ತವೆ. ಅಂತಹ ಪ್ರಾದೇಶಿಕ ಭಾಷೆಯ ಎಲ್ಲಾ ಅಂಶಗಳನ್ನು ವೈಶಾಖ ಕಾದಂಬರಿಯಲ್ಲಿ ಚದುರಂಗರು ಅಚ್ಚುಕಟ್ಟಾಗಿ ಬಳಸಿಕೊಂಡಿದ್ದಾರೆ.

ಮುಖ್ಯವಾಗಿ ಜನಪದ ದಾಟಿಯ ಸಣ್ಣ ಸಣ್ಣ ಪದ್ಯಗಳು ಓದುಗರಿಗೆ ಅಲ್ಲಲ್ಲಿ ರಂಜಕತೆಯೊಂದಿಗೆ ಗೂಡಾರ್ಥದ ಜಾಡನ್ನು ಹಿಡಿದು ತರ್ಕಿಸುವಂತೆ ಚಿಂತನೆಗೆ ಹಚ್ಚುತ್ತವೆ. ಅಂತಹ ಕೆಲವು ಅಂಶಗಳನ್ನು ಈ ಕೆಳಗಿನ ಪದ್ಯಗಳಲ್ಲಿ ಗಮನಿಸಬಹುದು.

ರಾಗಿ ಇಟ್ಟಿನ ಮುದ್ದೆ
ಮಾರಿಗುಡಿ ನಿದ್ದೆ
ಇದ್ದರೆ ಇದ್ದೆ
ಎದ್ದರೆ ಎದ್ದೆ... (ಪು.ಸಂ.2)
ಎಣ್ಣಿಗೆ ಪುಲ್ಲ,
ಎಡತಿ ಒಲ್ಲ,
ಯಾಕೆ ಒಲ್ಲ ?
ಸಿವನೆ ಬಲ್ಲ ! (ಪು.ಸಂ.12)

ವೊಟ್ಟೆ ತುಂಬ ಅಂಬಳಿ
ಮೈತುಂಬ ಕಂಬಳಿ
ಅನ್ನಬಟ್ಟೆ ಆಸ್ತಿ
ಮಿಕ್ಕಿದ್ದೆಲ್ಲ ಜಾಸ್ತಿ

ಮೀಸೆ ಬಂದರೆ ದೇಸ ಕಾಣಕ್ಕಿಲ್ಲ,
ಮೊಲೆ ಬಂದರೆ ನೆಲ ಕಾಣಕ್ಕಿಲ್ಲ (ಪು.ಸಂ.14)

ಹಳ್ಳಿ ವಾಸ
ನಾನೂ ಸಂತೋಸ
ನನ್ನೆತ್ತೂ ಸಂತೋಸ
ಪ್ಯಾಟೇ ವಾಸ
ಜಂಖಾನ ಹಾಸ
ನನ್ನೆತ್ತೂ ಉಪಾಸ
ನಾನೂ ಉಪಾಸ (ಪು.ಸಂ.125)

ಲಕ್ಕಪ್ಪ ಲಕ್ಕಪ್ಪ ಲೋ ಲೋ ಲೋ
ಎಕ್ಕದ ಗಿಡದಲ್ಲಿ ಲೋ ಲೋ ಲೋ
ಬೆನಕಪ್ಪ ಕುಂತವ್ನೆ ಲೋ ಲೋ ಲೋ
ಕರಿಗಡುಬ ತಿಂತವ್ನೆ ಲೋ ಲೋ ಲೋ (ಪು.ಸಂ.312)

ಉಪ್ಪಲ ಸೆಟ್ಟಿ
ಉಪ್ಪಲ ಸೆಟ್ಟಿ
ನೀ ತರ್ರೆ
ನಾ ಪುರ್ರೆ.... (ಪು.ಸಂ.174, 314, 315)

ವೈಶಾಖ ಕಾದಂಬರಿಯ ಸ್ಥಿತಪ್ರಜ್ಞ ಕೇಂದ್ರ ಪಾತ್ರವೆಂದರೆ ಲಕ್ಕ. ಪ್ರಜ್ಞಾಪ್ರವಾಹ ತಂತ್ರವನ್ನು ಬಳಸುವ ಪ್ರಗತಿಶೀಲ ಕಾದಂಬರಿಕಾರರ ಈ ಕೇಂದ್ರ ಪಾತ್ರವನ್ನು ವಸ್ತುನಿಷ್ಠ ಹಿನ್ನೆಲೆಯಲ್ಲಿ ವಿಶ್ಲೇಷಿಸಿರುವದನ್ನು ಮುಖ್ಯ. ವಸ್ತುನಿಷ್ಠತೆಯಿಂದ ಗಮನಿಸುವಾಗ ಈ ಪಾತ್ರದಲ್ಲಿ ಕೆಲವು ತೊಡಕುಗಳಾಗಿರುವುದು ಕಾಣುತ್ತೇವೆ. ಆ ಪಾತ್ರದೊಂದಿಗೆ ಕಾದಂಬರಿಕಾರರ ತಾದಾತ್ಮಕಥೆಯು ಉಂಟಾದಂತೆ ಕಾಣುತ್ತದೆ. ಅತಿಯೆಂಬಂತ್ತೆ ಆಶ್ಚರ್ಯವಾದರೂ ಪ್ರಜ್ಞಾ ಪ್ರವಾಹ ತಂತ್ರ ಅಸಹಜವಾದಂತೆ ಕಂಡಿದೆ. ಉದಾಹರಣೆಗೆ ಬೆಟ್ಟಯ್ಯ ಚಿಕ್ಕೇರಿಯ ಆಸ್ತಿಯನ್ನು ಕಬಳಿಸುವ ಸಂದರ್ಭದಲ್ಲಿ ಲಕ್ಕನು ಹತ್ತಿರದಲ್ಲಿ ಇರುವುದು. ಒಟ್ಟಿನಲ್ಲಿ ಈ ತಂತ್ರ ಯಶಸ್ವಿಯಾಗಿ ವೈಶಾಖ ಕಾದಂಬರಿಯಲ್ಲಿ ಮೂಡಿಬಂದಿದೆ. ಲಕ್ಕ ಕಲ್ಪನಾಜೀವಿ, ಚಿಂತನಾಜೀವಿ ಹೌದು ಅಲ್ಲವೋ ಗೊತ್ತಿಲ್ಲ ಆದರೆ ಭಾವಜೀವಿ ಎನಿಸಿಕೊಳ್ಳುತ್ತಾನೆ.

ಕಲ್ಪನಾ ಶಕ್ತಿಗೆ ಎಷ್ಟೋ ಉದಾಹರಣೆಗಳು ಇಲ್ಲಿವೆ. ದರಮನಹಳ್ಳಿಯೇ ಕಾದಂಬರಿಯ ಕ್ಷೇತ್ರ. ಧರಮನಹಳ್ಳಿಯ ಹತ್ತಿರವೇ ದ್ರೋಣರು ನಿರ್ಮಿಸಿದರೆಣ್ಣಲಾದ ಕೋಟೆ, ಪಂಚಾಯತಿಯ ಮುಂದೆ ಪಾಂಡವರ ಶಂಬುವಿದೆ. ಕಾಕತಾಳಿಯ ಎಂಬಂತೆ ಬಹಿಷ್ಕೃತವಾದರೂ ಬಿಡದೆ ಗಂಗವ್ವನನ್ನು ಎಳೆದು ತರುವಂತೆ ಒಮ್ಮೆ ಪಂಚಾಯಿತಿ ಅಜ್ಞಾಪಿಸುತ್ತದೆ. ಇದು ಪುರಾತನ ಮಹಾಭಾರತಕ್ಕೆ ಆಧುನಿಕ ಮಹಾಭಾರತದ ಪ್ರತಿಬಿಂಬ. ಆದರ್ಶ ಪಾತ್ರವಾಗಿ ಲಕ್ಕ ಕಾಣಸಿಗುವನು. ಪುರಾತನ ಪರಂಪರೆಗಳು, ನಡೆ–ನುಡಿಗಳು, ಆಚಾರ ವಿಚಾರಗಳು ನಮ್ಮ ಮೇಲೆ ಪ್ರಭಾವ ಬೀರದ ರೀತಿ ಎದ್ದು ಕಾಣುವುದು.

ಇಡೀ ಕಾದಂಬರಿಯನ್ನು ಗಮನಿಸಿದಾಗ ರೂಪಕಗಳನ್ನು, ಅಲಂಕಾರಗಳನ್ನು, ಪ್ರತಿಮೆಗಳನ್ನು ಹಾಗೂ ವರ್ಣನೆಗಳನ್ನು ಕಾಣುತ್ತೇವೆ. ಲಕ್ಕನು ಕಂಡಿರುವ ಬಿಮ್ಮಸಿನಿಯ ಭಯಂಕರ ದೃಶ್ಯ ಅವನ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತದೆ. ತನ್ನ ಕಾಯಿಲೆ ಎಂಬಲ್ಲಿಯೂ ತನಗೆ ರೊಟ್ಟಿ ತಂದುಕೊಟ್ಟ ಮರಳುವಾಗ ಸತ್ತ ತಾಯಿಗೆ ಲಕ್ಕ ಮಾಡುವ ಕ್ಷಣ ಸೇವೆ ಸದೃಶ ಚಿತ್ರಣದಂತಿದೆ. ದೇವಜಿ ಮತ್ತು ಅವಳ ಗೆಳತಿಯರು ಬೆಳದಿಂಗಳಲ್ಲಿ ಚಾಪೆ ಹೆಣೆಯುವ ದೃಶ್ಯ ಮತ್ತು ಅವರ ಮಾತುಕತೆ ಆಕರ್ಷಕ ರೂಪದಂತಿದೆ. ಲಕ್ಕನು ಗರುಡಗಂಬದ ದಾಸಯ್ಯನ ಬಳಿ ನೋಡುವ ಮತ್ತೆ ಕಥೆಯಲ್ಲಿ ಆಕಾಶದಲ್ಲಿ ನೋಡುವ ಗರುಡ ಉಪ್ಪಲಶೆಟ್ಟಿಯಿಂದ ತನ್ನ ಸ್ವಾತಂತ್ರ ಕಲ್ಪನಾತೀತವಾಗಿ ಪಡೆದುಕೊಂಡು ಬಿಡುವ ಸ್ವತಂತ್ರ ಹಕ್ಕಿ.

ನಿಲ್ಲಲು ಮೆಲ್ಲನೆ ಕಲಿಯುವ ಆನೆ ಮರೆಯ, ಹಾವನ್ನೆ ಹಿಂಸಿಸಿಕೊಲ್ಲುವ ನೊಣಗಳ ಸಮೂಹ ಇಂತಹ ಸಂಕೇತಗಳು ಅದಕ್ಕೆ ಸಾಕ್ಷಿ. ಚಕ್ರವ್ಯೂಹಕ್ಕೆ ಸಿಲುಕಿದ ರುಕ್ಮಿಣಿಯ ಉತ್ತಮಿಕೆಯ ಪ್ರತೀಕ. ಕನಸಿನಲ್ಲಿ ಕಾಡುವ ಈ ಸಂದರ್ಭ ತನ್ನೊಳಗೆ ಪಡೆದುಕೊಳ್ಳುತ್ತದೆ. ಸ್ತ್ರೀ ಮತ್ತು ಪುರುಷ ಕೇಂದ್ರಿತ ಕ್ರಿಯಾ ಕೇಂದ್ರ ಪಾತ್ರಗಳ ಮೂಲಕ ಅಭಿಪ್ರಾಯ ಬಿನ್ನತೆಯ ಮಜಲುಗಳನ್ನು ತೆರೆದಿಟ್ಟರು ಅದರ ಕಾವ್ಯಾತ್ಮಿಕವಾದ ಶಿಲ್ಪ, ಗದ್ಯದ ಉಚ್ಚಾ್ರಯ ಸ್ಥಿತಿ, ಸಂಕೇತಗಳು ಪ್ರಜ್ಞಾಪ್ರವಾಹ ತಂತ್ರ, ಶೈಲಿ, ಅದು ಸೃಷ್ಟಿಸುವ ಕಾಮದ

ಕುಂಡಲದಂತಿರುವ ಜ್ವಲಂತ ಜೀವಂತ, ಜೀವಲೋಕದ ಪ್ರತಿಬಿಂಬ. ಪ್ರಸಂಗಗಳು, ಪಾತ್ರಗಳ ವೈವಿಧ್ಯತೆಯ ಪ್ರಾಪ್ತಿ, ಹೆಣ್ಣು ಮತ್ತು ಹರಿಜನರ ಬಗ್ಗೆ ಅವರಲ್ಲಿ ಮಿಡಿಯುವ ಅನುಕಂಪ, ಅವರ ಬಗ್ಗೆ ಆಶಾವಾದ ವೈಶಾಖ ಕಾದಂಬರಿಯನ್ನು ಕನ್ನಡದ ಶ್ರೇಷ್ಠವಾದ ಕಾದಂಬರಿಗಳ ಸಾಲಿಗೆ ಸೇರಿಸುವಲ್ಲಿ ದುಡಿಸಿಕೊಂಡು ನಿಸ್ಸಂಕೋಚವಾಗಿ ಸೇರಿಸುತ್ತವೆ.

**ಅಡಿ ಟಿಪ್ಪಣಿ**

1. **ವೈಶಾಖ ಕಾದಂಬರಿ ಪುಟ ಸಂಖ್ಯೆ 01**
2. **ವೈಶಾಖ ಕಾದಂಬರಿ ಪುಟ ಸಂಖ್ಯೆ 03**
3. **ವೈಶಾಖ ಕಾದಂಬರಿ ಪುಟ ಸಂಖ್ಯೆ 02**
4. **ವೈಶಾಖ ಕಾದಂಬರಿ ಪುಟ ಸಂಖ್ಯೆ 12**
5. **ವೈಶಾಖ ಕಾದಂಬರಿ ಪುಟ ಸಂಖ್ಯೆ 14**
6. **ವೈಶಾಖ ಕಾದಂಬರಿ ಪುಟ ಸಂಖ್ಯೆ 125**
7. **ವೈಶಾಖ ಕಾದಂಬರಿ ಪುಟ ಸಂಖ್ಯೆ 312**
8. **ವೈಶಾಖ ಕಾದಂಬರಿ ಪುಟ ಸಂಖ್ಯೆ 174, 314, 315**